ರಾಜ್ಯ ವಯಸ್ಕರ ಶಿಕ್ಷಣ ಸಮಿತಿಗೆ ಅನುದಾನ.

೧೪೨೪(೧೭೪೫)

ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್(ಗುಂಡ್ಲುಪೇಟೆ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ವಯಸ್ಕರ ಶಿಕ್ಷಣ ಸಮಿತಿಗೆ ೯೭-೯೮, ೯೮-೯೯ ಮತ್ತು ೯೯-೨೦೦೦ನೇ ಸಾಲಿನಲ್ಲಿ ಯೋಜನೆ ಮತ್ತು ಯೋಜನೇತರ ಬಾಬ್ತಿಗೆ ಸರ್ಕಾರ ನಿಗಧಿಪಡಿಸಿದ ಅನುದಾನ ಎಷ್ಟು;

ಆ) ಯೋಜನೆ ಬಾಬ್ತಿನಲ್ಲಿ ಈ ಸಾಲುಗಳಲ್ಲಿ ನಿಗಧಿಪಡಿಸಿದ್ದ ಅನುದಾನ ಪೂರ್ಣವಾಗಿ ಬಿಡುಗಡೆಯಾಗಿದೆಯೆ; ಬಿಡುಗಡೆಯಾಗದಿದ್ದಲ್ಲಿ ಕಾರಣವೇನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಸರ್ಕಾರ ನಿಗಧಿಪಡಿಸಿದ ಅನುದಾನದ ವಿವರಗಳು:

	ಯೋಜನೇತರ ರೂ.	ಯೋಜನೆ ರೂ.
೯೭-೯೮: ನಿಗಧಿಪಡಿಸಿದ ಅನುದಾನ	88,00,000.00	70,00,000.00
ಹೆಚ್ಚುವರಿ ಅನುದಾನ	40,50,000.00	-
ಒಟ್ಟು ಬಿಡುಗಡೆಯಾದ ಅನುದಾನ	1,28,50,000.00	70,00,000.00
೯೮-೯೯: ನಿಗಧಿಪಡಿಸಿದ ಅನುದಾನ	1,26,50,000.00	60,00,000.00
ಹೆಚ್ಚುವರಿ ಬಿಡುಗಡೆಯಾದ ಅನುದಾನ	45,52,496.00	-
ಒಟ್ಟು ಬಿಡುಗಡೆಯಾದ ಅನುದಾನ	1,72,02,496.00	60,00,000.00

೯೯-೨೦೦೦: ನಿಗಧಿಪಡಿಸಿದ ಅನುದಾನ	1,45,47,000.00	50,00,000.00
ಹೆಚ್ಚುವರಿ ಅನುದಾನ ಗ್ರಾಂಟ್ ನಂ.೧೦೦ರಿಂದ ಪುನರ್ ವಿನಿಯೋಗದ ಮೂಲಕ ಬಂದಿದ್ದು	50,00,000.00	-
ಒಟ್ಟು ಅನುದಾನ	1,95,47,000.00	50,00,000.00

ಅ) ನಿಗಧಿಪಡಿಸಿದ್ದಕ್ಕಿಂತ ಹೆಚ್ಚುವರಿ ಅನುದಾನ ಯೋಜನೇತರ ಬಾಬ್ತಿನಲ್ಲಿ ಬಿಡುಗಡೆಯಾಗಿದೆ. ಆದರೆ, ೯೯-೨೦೦೦ರ ಸಾಲಿನಲ್ಲಿ ಯೋಜನೆಯಡಿಯಲ್ಲಿ ನಿಗದಿಪಡಿಸಿದ ಹಣ ರೂ.೫೦,೦೦,೦೦೦.೦೦ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಲಿಲ್ಲ. ಸರ್ಕಾರದ ಪತ್ರ ಸಂಖ್ಯೆ: ಇಡಿ ೮೯ ಯೋಯೋಕಾ ೨೦೦೦, ದಿನಾಂಕ:೨೪-೩-೨೦೦೦ದನ್ವಯ ಅನುದಾನದ ಕೊರತೆಯಿಂದಾಗಿ ರೂ.೧೦ ಕೋಟಿಗಳನ್ನು ಶಿಕ್ಷಣ ವಲಯದಲ್ಲಿ ಕಡಿತಗೊಳಿಸಲಾಗಿದೆ. ಈ ಪೈಕಿ ಈ ಇಲಾಖೆಗೆ ಸಂಬಂಧಪಟ್ಟ ರೂ.೫೦ ಲಕ್ಷಗಳನ್ನು ಕಡಿತಗೊಳಿಸಲಾಗಿದೆ.

ವಯಸ್ಕರ ಶಿಕ್ಷಣ ಸಮಿತಿಗೆ ಸಿಬ್ಬಂದಿ ನೇಮಕ.

೧೪೨೫(೧೭೪೬)

ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲಪೇಟೆ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇಲ್ಲಿ ಹೆಚ್ಚುವರಿಯಾಗಿರುವ ನೌಕರರನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆಯೆ;

ಆ) ನಿಯೋಜಿಸುವ ಕಾರ್ಯ ಪ್ರಾರಂಭವಾಗಿದ್ದಲ್ಲಿ ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಇ) ನಿಯೋಜನೆ ಕಾರ್ಯ ಪ್ರಾರಂಭವಾಗದಿದ್ದಲ್ಲಿ ಕಾರಣವೇನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ